## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ.ನಂ:10004/2024**

**ಚಾಸಾ : 16**

**ಪ್ರಾಸಾ : 02**

| | | |
|---|---|---|
| **ಹೆಸರು** | : | ರಾಜಶೇಖರ |
| **ತಂದೆಯ ಹೆಸರು** | : | ಮುನಿಕೃಷ್ಣಪ್ಪ |
| **ವಯಸ್ಸು** | : | 29 ವರ್ಷ |
| **ವೃತ್ತಿ** | : | ಆಟೋ ಚಾಲಕ |
| **ವಾಸ** | : | ಶ್ರೀನಗರ, ದೊಡ್ಡಬಳ್ಳಾಪುರ |

**ಈ ದಿನ ದಿನಾಂಕ: 29-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ :**

**1.** ಕಳೆದ **8** ತಿಂಗಳು ಹಿಂದೆ **13** ನೇ ತಾರೀಖಿನಂದು ತಿಂಗಳು ಮತ್ತು ವರ್ಷ ಗೊತ್ತಿರುವುದಿಲ್ಲ, ನನ್ನನ್ನು ಮತ್ತು ಹೇಮಂತ ಅವರನ್ನು ದೊಡ್ಡಬಳ್ಳಾಪುರ ನಗರ ಠಾಣಾ ಪೋಲಿಸರು ಠಾಣೆಗೆ ಕರೆಸಿದ್ದರು. ಠಾಣೆಗೆ ಹೋಗಿದ್ದಾಗ ಒಬ್ಬ ವ್ಯಕ್ತಿಯನ್ನು ತೋರಿಸಿ ಈತ ಕೊಲೆ ಮಾಡಿರುತ್ತಾನೆ ಎಂದು ಹೇಳಿ ಆ ವ್ಯಕ್ತಿಯು ಸ್ಥಳ ತೋರಿಸುತ್ತೇನೆ ಎಂದು ಹೇಳಿದ್ದರಿಂದ ಸ್ಥಳಕ್ಕೆ ಹೋಗಬೇಕೆಂದು ಹೇಳಿ ಠಾಣೆಯಲ್ಲಿ ಸಹಿ ಪಡೆದುಕೊಂಡಿರುತ್ತಾರೆ. ನಾನು ಸಹಿ ಮಾಡಿದ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ **2** ಎಂದು ಗುರುತಿಸಲಾಯಿತು, ಅದರಲ್ಲಿದ್ದ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ **2(ಎ)** ಎಂದು ಗುರುತಿಸಲಾಯಿತು. ಆ ದಿನ ಠಾಣೆಯಲ್ಲಿ ನೋಡಿದ ವ್ಯಕ್ತಿ ಇಂದು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಿದ್ದು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

**2.** ನಂತರ ಅದೇ ದಿನ ಆ ವ್ಯಕ್ತಿಯು ನಮ್ಮನ್ನು ಅಂದರೆ ಪೋಲಿಸರನ್ನು, ನನ್ನನ್ನು ಮತ್ತು ಹೇಮಂತನನ್ನು ಆತನ ಮನೆಯ ಹತ್ತಿರ ಕರೆದುಕೊಂಡು ಹೋಗಿರುತ್ತಾನೆ.

**3.** ಇದೇ ಜಾಗದಲ್ಲಿ ಕೊಲೆ ಮಾಡಿರುವುದು ಎಂದು ರೂಮಿನ ಒಳಗಡೆ ಸ್ಥಳ ತೋರಿಸಿರುತ್ತಾನೆ. ಸದರಿ ರೂಮಿನಲ್ಲಿ ಮಂಚದ ಕೆಳಗೆ ಇದ್ದ ಚಾಕುವನ್ನು ಆ ವ್ಯಕ್ತಿಯು ತೆಗೆದು ಎತ್ತಿ ಕೊಟ್ಟು ಇದರಿಂದಲೇ ಕೊಲೆ ಮಾಡಿರುತ್ತೇನೆಂದು ಹೇಳಿರುತ್ತಾನೆ. ಪೋಲಿಸರು ಅದನ್ನು ತೆಗೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ ಮತ್ತು ಪೊಟೋ ತೆಗೆದುಕೊಂಡಿರುತ್ತಾರೆ. ನಾನು ಅಲ್ಲಿ ಸಹಿ ಮಾಡಿದ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ **3** ಎಂದು ಗುರುತಿಸಲಾಯಿತು. ಅದರಲ್ಲಿದ್ದ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ

ಗುರುತಿಸಿದ್ದರಿಂದ ಅದನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಹೇಮಂತನು ಸಹ ಸಹಿ ಮಾಡಿರುತ್ತಾನೆ.

4. ಅಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ಫೋಟೋಗಳಲ್ಲಿ ತಾನು ಹೇಮಂತ, ಪೋಲಿಸರು ಮತ್ತು ಆ ವ್ಯಕ್ತಿ ಇರುವುದನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ. ಸದರಿ ಫೋಟೋಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಸ್ಥಳದಲ್ಲಿ ಸಂಜೆ 05.00 ರಿಂದ 50.30 ರ ವರೆಗೆ ಇದ್ದೆವು. ಆ ವ್ಯಕ್ತಿಯು ನೀಡದ ಚಾಕುವನ್ನು ಇಂದು ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸದರಿ ಚಾಕುವನ್ನು ಬಿಳಿ ಬಟ್ಟೆಯ ಚೀಲದಲ್ಲಿ ಸೀಲು ಮಾಡಿದ್ದರಿಂದ ಸಾಕ್ಷಿದಾರರು ನೋಡಿ ಗುರುತಿಸಲು ಅದನ್ನು ತೆರೆಯಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

ನಂತರ ಸದರಿ ಸಾಕ್ಷಿದಾರರು ಸದರಿ ಚಾಕುವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಮುದ್ದೆ ಮಾಲು 1 ಚಾಕುವನ್ನು ಪ್ಯಾಕ್ ಮಾಡಿದ ಬಿಳಿ ಚೀಲದ ಮೇಲೆ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಸದರಿ ಚೀಟಿಯಲ್ಲಿ ತನ್ನ ಸಹಿ ಇರುವುದನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯ ವಕೀಲರನ್ನು ಕರೆಯಲಾಯಿತು ಗೈರುಹಾಜರಿರುತ್ತಾರೆ ಯಾರೂ ಪ್ರತಿನಿಧಿಸಿರುವುದಿಲ್ಲ ವಕೀಲರ ಬಗ್ಗೆ ಆರೋಪಿಯಲ್ಲಿ ವಿಚಾರಿಸಿದಾಗ ಬರುತ್ತಾರೆ ಎಂದು ತಿಳಿಸಿರುತ್ತಾರೆ ಆದರೆ ಈ ಹಿಂದಿನ ವಿಚಾರಣೆಯ ಸಮಯದಲ್ಲೂ ಸಹ ವಕೀಲರು ಹಾಜರಾಗಿರುವುದಿಲ್ಲ ಮತ್ತು ಯಾರು ಪ್ರತಿನಿಧಿಸಿರುವುದಿಲ್ಲ ಹಾಗೂ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯ ಪರವಾಗಿ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಯಿತು.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ